O.S. No.224/2018 P.W. 1 Dated :25-07-2023.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲು -ಶ್ರೀ. ಬಿ.ಎಂ.ಜಿ. ವಕೀಲರಿಂದಃ-

ನಾನು ಲಕ್ಷ್ಮಮ್ಮನವರ ಮಗಳು. ಮರಿಯಮ್ಮ ನನ್ನ ತಂದೆಯ ತಾಯಿ. ಮರಿಯಮ್ಮನ ಗಂಡನ ಹೆಸರು ಈರೇಗೌಡ . ಈರೇಗೌಡರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಮರಿಯಮ್ಮನ ಅಕ್ಕನ ಹೆಸರು ನಿಂಗಮ್ಮ ಎಂದರೆ ಸರಿ . ಕರಿಗೌಡರ ಹೆಂಡತಿ ನಿಂಗಮ್ಮ ಎಂದರೆ ಸರಿ . ನಾನು ದಾವಾ ಸ್ವತ್ತಿನ ಹಕ್ಕುದಾರ ರೆಂದು ಘೋಷಿಸುವಂತೆ ದಾವೆ ಹೂಡಿರುತ್ತೇನೆ. ನಾನು ಹುಟ್ಟುವ ಮೊದಲೇ ನನ್ನ ಅಜ್ಜಿ, ತಾತ ದಾವಾ ಸ್ವತ್ತನ್ನು ರಂಗೇಗೌಡರಿಂದ ಖರೀದಿ ಮಾಡಿದರು. ಸ.ನಂ.154/4 ರಲ್ಲಿ ಒಟ್ಟು 1 ಎಕರೆ 12 ಗುಂಟೆ ಖರೀದಿ ಮಾಡಿದ್ದರು. ಈರೇಗೌಡ ಮರಿಯಮ್ಮನವರು ಖರೀದಿ ಮಾಡಿದಂತಹ ಕ್ರಯಪತ್ರವನ್ನುನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ಅಜ್ಜಿ ತಾತನಾದ ಈರೇಗೌಡ, ಮರಿಯಮ್ಮನವರು ಖರೀದಿ ಮಾಡಿದಂತಹ ಕ್ರಯಪತ್ರ ಮತ್ತು ಕೈಬರಹದ ಪಹಣಿಗಳನ್ನು ಪ್ರತಿವಾದಿ -1(ಸಿ) ರವರಿಗೆ ಓದಲು ನೀಡಿದ್ದೆನು. ಅವರು ನಾನು ನೀಡಿದ ಕ್ರಯಪತ್ರವನ್ನುಹಿಂದಿರುಗಿಸದೆ ತಮ್ಮಲ್ಲಿಯೇ ಇಟ್ಟುಕೊಂಡು ಉಳಿಕೆ ಕೈಬರಹದ ಪಹಣಿಗಳನ್ನು ಮಾತ್ರ ನನಗೆ ಹಿಂದಿರುಗಿಸಿದರು. ಕ್ರಯಪತ್ರನೊಂದಣಿಯಾಗಿದ್ದಲ್ಲಿ ನೊಂದಣಿ ಇಲಾಖೆಯಿಂದ ದೃಢೀಕೃತ ಪ್ರತಿಯನ್ನು ಪಡೆದುಕೊಳ್ಳಬಹುದು ಎಂದರೆ ಸರಿ . ನಾನು ನೊಂದಣಿ ಇಲಾಖೆಗೆ ದೃಢೀಕೃತ ನಕಲನ್ನು ಕೋರಿ ಅರ್ಜಿ ಸಲ್ಲಿಸಿದಾಗ ದಾಖಲೆ ಲಭ್ಯವಿರುವುದಿಲ್ಲ ಎಂದು ನೊಂದಣಿ ಇಲಾಖೆಯವರು ಹಿಂಬರಹ ನೀಡಿರುತ್ತಾರೆ. ಯಾವ ವರ್ಷದಲ್ಲಿ ಮರಿಯಮ್ಮ ಮತ್ತು ಈರೇಗೌಡ ದಾವಾ ಸ್ವತ್ತನ್ನು ಖರೀದಿ ಮಾಡಿದರು ಎಂದು ನನಗೆ ಹೇಳಲಾಗುವುದಿಲ್ಲ. ನಾನು ವಿಲ್ ನ ಆಧಾರದ ಮೇಲೆ ಹಕ್ಕನ್ನು ಕೋರಿದ್ದು , ಕ್ರಯಪತ್ರದ ಆಧಾರದ ಮೇಲೆ ಕೋರಿರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ಅಜ್ಜಿಯು ನನಗೆ ವಿಲ್ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಿಃ08-05-1935 ರಲ್ಲಿ ಸ.ನಂ. 154/4 ರಲ್ಲಿ 1 ಎಕರೆ 01 ಗುಂಟೆ ಪೈಕಿ 0-14 ಗುಂಟೆ ಜಮೀನನ್ನು ರಂಗೇಗೌಡರಿಂದ ಪ್ರತಿವಾದಿಯ ಅಜ್ಜ

ಕರೇಗೌಡರು ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ದಿಃ 11-03-1948 ರಲ್ಲಿ ಸ.ನಂ. 154/4 ರಲ್ಲಿ 1 ಎಕರೆ 01 ಗುಂಟೆ ಪೈಕಿ 0-27 ಗುಂಟೆಯನ್ನು ರಂಗೇಗೌಡರಿಂದ ನಮ್ಮ ಅಜ್ಜಿ ಮರಿಯಮ್ಮನವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ . ಆ ಕಾರಣ ನನ್ನ ಅಜ್ಜಿ ಮರಿಯಮ್ಮನವರಿಗೆ ಸ.ನಂ. 154/4 ರಲ್ಲಿ 0-27 ಗುಂಟೆಗೆ ಮಾತ್ರ ಹಕ್ಕು ಇತ್ತು ಎಂದರೆ ಸರಿಯಲ್ಲ. ಸ.ನಂ. 154/4 ರಲ್ಲಿನ ಉಳಿಕೆ 0-14 ಗುಂಟೆ ಪ್ರತಿವಾದಿ -1(ಎ) ಯಿಂದ (ಡಿ) ರವರ ಅಜ್ಜನಾದ ಕರೇಗೌಡ ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಸ.ನಂ. 154/4 ರಲ್ಲಿ 0-27 ಗುಂಟೆ ಮರಿಯಮ್ಮನವರಿಗೆ ಮತ್ತು 0-14 ಗುಂಟೆ ಕರೇಗೌಡರ ಹೆಸರಿನಲ್ಲಿ ನೊಂದಾಯಿತ ಕ್ರಯಪತ್ರವಾಗಿರುತ್ತದೆ ಎಂದರೆ ಸಾಕ್ಷಿಯು ಕರೇಗೌಡರು ಎಂದಿಗೂ ಸಹ ಸ್ವತ್ತನ್ನು ಖರೀದಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. 1984 ನೇ ಸಾಲಿನವರೆಗೂ ಪಹಣಿಯಲ್ಲಿ ಸ.ನಂ. 154/4 ರ 1 ಎಕರೆ 01 ಗುಂಟೆಗೆ ಕರೇಗೌಡರ ಹೆಸರು ನಮೂದಾಗಿತ್ತು ಎಂದರೆ ಸರಿಯಲ್ಲ. 1984 ನೇ ಸಾಲಿನಲ್ಲಿ ನನ್ನ ಅಜ್ಜಿ ಮರಿಯಮ್ಮ ಕಂದಾಯ ಅಧಿಕಾರಿಗಳನ್ನು ಶರೀಖು ಮಾಡಿಕೊಂಡು ಪಹಣಿಯಲ್ಲಿದ್ದ ಕರೇಗೌಡರ ಹೆಸರನ್ನು ತಿದ್ದುಪಡಿ ಮಾಡಿ ಈರೇಗೌಡ ಎಂದು ತನ್ನ ಗಂಡನ ಹೆಸರನ್ನು ನಮೂದಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮರಿಯಮ್ಮನವರು ಕ್ರಯಪತ್ರದಂತೆ ಸ್ವತ್ತನ್ನು ಖರೀದಿ ಮಾಡಿದ ನಂತರ ಅದಕ್ಕನುಗುಣವಾಗಿ ಕಂದಾಯ ದಾಖಲೆಗಳನ್ನು ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿ ಕರೇಗೌಡರ ಹೆಸರನ್ನು ತಿದ್ದುಪಡಿ ಮಾಡಿಕೊಂಡು ಕರೇಗೌಡರ ಹೆಸರಿನಲ್ಲಿದ್ದ 1 ಎಕರೆ 01 ಗುಂಟೆ ಜಮೀನನ್ನು ಮರಿಯಮ್ಮನವರು ತಮ್ಮ ಹೆಸರಿಗೆ ಬದಲಾಯಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮರಿಯಮ್ಮನವರು ಪಹಣಿಯನ್ನು ತಿದ್ದುಪಡಿ ಮಾಡಿಸಿಕೊಂಡಾಗ ಪ್ರತಿವಾದಿಗಳ ತಂದೆ ಲಂಕೇಗೌಡರು ಮರಿಯಮ್ಮನವರು ಪ್ರಶ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಆ ವೇಳೆಯಲ್ಲಿ ಮರಿಯಮ್ಮ ಮತ್ತು ಆಕೆಯ ಅಕ್ಕ ನಿಂಗಮ್ಮ ಮತ್ತು ಲಂಕೇಗೌಡರು ತಮ್ಮ ತಮ್ಮಲ್ಲಿಯೇ ಸರಿಪಡಿಸಿಕೊಳ್ಳುವ ಬಗ್ಗೆ ರಾಜಿ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ರಾಜಿ ಆಧಾರದ ಮೇಲೆ ಮರಿಯಮ್ಮನ ಅಕ್ಕ ನಿಂಗಮ್ಮನವರು 07 ಗುಂಟೆಯನ್ನು ಬಿಟ್ಟುಕೊಟ್ಟ ಕಾರಣ ಲಂಕೇಗೌಡರ ಹೆಸರಿನಲ್ಲಿ ಹಿಂದೆ ಕ್ರಯವಾಗಿದ್ದ 14 ಗುಂಟೆ ಜೊತೆಗೆ 07 ಗುಂಟೆ ಸೇರಿ ಒಟ್ಟು 21 ಗುಂಟೆ ಲಂಕೇಗೌಡರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಅದರಂತೆ

ಲಂಕೇಗೌಡರ ಹೆಸರಿಗೆ ಮ್ಯುಟೇಶನ್ ಅಂಗೀಕಾರ ವಾಗಿರುತ್ತದೆ ಎಂದರೆ ಸರಿಯಲ್ಲ. ಅಂದಿನಿಂದಲೂ ಸಹ ಸ.ನಂ. 154/4 ರ 21 ಗುಂಟೆ ಜಮೀನಿನಲ್ಲಿ ಲಂಕೇಗೌಡರು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು 7 ರಿಂದ 8 ಗುಂಟೆ ಜಮೀನಿನಲ್ಲಿ ಮಾತ್ರ ಲಂಕೇಗೌಡರು ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.